# ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಕಾಯಿದೆ 2001




ಲೇಖಕರು

**ಡಾ॥ ನಿರಂಜನ ಮೂರ್ತಿ**

ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಪೂರ್ಣ ಬಳಕೆಯಾಗಿರದ ಬೆಳೆಗಳ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560065

















ಸಂಪಾದಕರು ಹಾಗೂ ಪ್ರಕಾಶಕರು

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು

ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ, ಸುತ್ತೂರು

ನಂಜನಗೂಡು ತಾಲ್ಲೂಕು, ಮೈಸೂರು-571 129

ಪ್ರಾಯೋಜಕರು

ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಪ್ರಾಧಿಕಾರ, ನವದೆಹಲಿ

## ಕಾಯಿದೆಯ ಹಿನ್ನೆಲೆ


ಕೃಷಿ ಉತ್ಪಾದನೆಯಲ್ಲಿ ಸಸ್ಯ ತಳಿಗಳ ಪಾತ್ರ ಬಹಳ ಪ್ರಮುಖವಾಗಿದೆ. ನಮ್ಮ ದೇಶದಲ್ಲಿ 60ರ ದಶಕದಲ್ಲಿ ಭತ್ತ ಮತ್ತು ಗೋಧಿ ಬೆಳೆಗಳಲ್ಲಿ ಅರೆಕುಬ್ಜ ತಳಿಗಳನ್ನು ಪರಿಚಯಿಸಿ, ಅವುಗಳನ್ನು ಉಪಯೋಗಿಸಿ ಸುಧಾರಿತ ಹೊಸ ತಳಿಗಳನ್ನು ಅಭಿವೃದ್ಧಿ ಪಡಿಸಿರುವುದು ಹಾಗೂ ಕೃಷಿಯಲ್ಲಿ ಸಾಧಿಸಿದ ಹಸಿರು ಕ್ರಾಂತಿಯು ಒಂದು ಸುವರ್ಣ ಇತಿಹಾಸ. ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಭರದಲ್ಲಿ ಸಸ್ಯ ತಳಿಗಳ ಮಾಲೀಕತ್ವ ಪಡೆಯುವುದರ ಬಗ್ಗೆ ಯಾರಿಗೂ ಯೋಚನೆ ಬರಲಿಲ್ಲ. ಆದರೆ, ಇಂದು ಸಸ್ಯ ತಳಿಗಳ ರಕ್ಷಣೆಗೆ ಭಾರತವೂ ಸೇರಿದಂತೆ, ಅನೇಕ ರಾಷ್ಟ್ರಗಳು, ಅದರಲ್ಲೂ, ವಿಶ್ವ ವಾಣಿಜ್ಯ ಸಂಸ್ಥೆಯ ಸದಸ್ಯ ರಾಷ್ಟ್ರಗಳು ಸಸ್ಯ ತಳಿಗಳ ರಕ್ಷಣೆ ವಿಷಯವನ್ನು ಮಾನ್ಯ ಮಾಡಲೇಬೇಕಾಗಿದೆ. ಇದಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಶಾಸನಗಳನ್ನು ಜಾರಿಗೊಳಿಸಿ, ಸಸ್ಯ ತಳಿಗಳಿಗೆ ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆ ನೀಡುವ ಪ್ರಯತ್ನ ಮಾಡಬೇಕಾಗಿದೆ. ಅಲ್ಲದೇ, ಸಸ್ಯ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಹೊಸ ತಳಿಗಳನ್ನು ಅಭಿವೃದ್ಧಿಪಡಿಸುವಲ್ಲಿ ರೈತರು ತಲತಲಾಂತರಗಳಿಂದ ಹಲವಾರು ರೀತಿಯಲ್ಲಿ ನೀಡಿರುವ, ನೀಡುತ್ತಿರುವ ಕೊಡುಗೆಯನ್ನು ಗುರುತಿಸಿ ಅವರ ಹಕ್ಕುಗಳನ್ನು ಮಾನ್ಯ ಮಾಡುವುದು ಸಹ ಬಹಳ ಮುಖ್ಯವಾಗಿದೆ. ಇದರ ಜೊತೆಗೆ ರಾಷ್ಟ್ರದ ಬೀಜೋದ್ಯಮದ ಪ್ರಗತಿಯು ಸಹ ಅಷ್ಟೆ ಮುಖ್ಯ. ಈ ಎಲ್ಲಾ ಅಂಶಗಳನ್ನು ಕಾನೂನಿನ ಚೌಕಟ್ಟಿಗೆ ಒಳಪಡಿಸಿ ಸಸ್ಯ ತಳಿಗಳ ಮತ್ತು ರೈತರ ಹಕ್ಕುಗಳ ರಕ್ಷಣಾ ಕಾಯಿದೆಯನ್ನು ದೇಶದಾದ್ಯಂತ ಜಾರಿಗೊಳಿಸಲಾಗುತ್ತಿದೆ.

## ಕಾಯಿದೆಯ ಮೂಲ ಉದ್ದೇಶ

1. ಸಸ್ಯ ಸಂಪನ್ಮೂಲಗಳ ಸಂರಕ್ಷಣೆ ಮತ್ತು ವಿವಿಧ ಬೆಳೆಗಳಲ್ಲಿ ತಳಿಗಳನ್ನು ಅಭಿವೃದ್ಧಿ ಪಡಿಸುವಲ್ಲಿ, ರೈತರು ತಲತಲಾಂತರಗಳಿಂದ ಹಲವಾರು ರೀತಿಯಲ್ಲಿ ನೀಡಿರುವ, ನೀಡುತ್ತಿರುವ ಕೊಡುಗೆಯನ್ನು ಗುರುತಿಸಿ ಅವರ ಹಕ್ಕುಗಳನ್ನು ಮಾನ್ಯ ಮಾಡುವುದು.
2. ವಿಶ್ವ ವಾಣಿಜ್ಯ ಸಂಸ್ಥೆ (WTO) ಯೊಡನೆ ನಮ್ಮ ದೇಶ ಒಪ್ಪಂದ ಮಾಡಿಕೊಂಡಿರುವಂತೆ ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳನ್ನು (TRIPS) ರಕ್ಷಿಸಲು ಸದಸ್ಯ ರಾಷ್ಟ್ರಗಳು ತಮ್ಮ ದೇಶಗಳಲ್ಲಿರುವ ಸಸ್ಯ ತಳಿಗಳನ್ನು ಕಾನೂನಿನ ಚೌಕಟ್ಟಿನಲ್ಲಿ ರಕ್ಷಣೆ ಮಾಡುವುದು.
3. ಕೃಷಿ ಅಭಿವೃದ್ಧಿಯ ದೃಷ್ಟಿಯಿಂದ ಹೊಸ ತಳಿಗಳ ಅಭಿವೃದ್ಧಿ ಪ್ರಕ್ರಿಯೆಯನ್ನು ಪ್ರೋತ್ಸಾಹಿಸುವುದು ಮತ್ತು ಈ ಕ್ರಿಯೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ಹೆಚ್ಚು ಬಂಡವಾಳ ತೊಡಗಿಸುವಂತೆ ಉತ್ತೇಜನ ನೀಡುವುದು. ಇದರ ಜೊತೆಗೆ ತಳಿ ಮತ್ತು ಬಿತ್ತನೆ ಬೀಜಗಳ ಮೇಲೆ ಇರುವ ತಳಿವರ್ಧಕರ, ಸಂಶೋಧಕರ ಮತ್ತು ರೈತರ ಹಕ್ಕುಗಳನ್ನು ರಕ್ಷಿಸುವುದು
4. ರೈತರಿಗೆ ಉತ್ತಮ ಗುಣಮಟ್ಟದ ಬಿತ್ತನೆ ಬೀಜವನ್ನು ದೊರಕಿಸಲು ಅನುವಾಗುವಂತೆ ಬೀಜೋದ್ಯಮವನ್ನು ಪ್ರೋತ್ಸಾಹಿಸುವುದು.

## ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಪ್ರಾಧಿಕಾರದ ರಚನೆ

ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಕಾಯಿದೆಯನ್ನು ದೇಶದಾದ್ಯಂತ ಅನುಷ್ಠಾನಗೊಳಿಸುವುದಕ್ಕೆ ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಪ್ರಾಧಿಕಾರವನ್ನು 2005ರಲ್ಲಿ ರಚಿಸಲಾಗಿದೆ. ಈ ಪ್ರಾಧಿಕಾರವು ನವದೆಹಲಿಯಲ್ಲಿದ್ದು ಭಾರತ ಸರ್ಕಾರವು ಪ್ರಾಧಿಕಾರದ ಅಧ್ಯಕ್ಷರನ್ನು ನೇಮಕ ಮಾಡುವುದು. ಪ್ರಸ್ತುತದಲ್ಲಿ ಕರ್ನಾಟಕ ರಾಜ್ಯದ ಖ್ಯಾತ ಕೃಷಿ ವಿಜ್ಞಾನಿಯಾದ ಡಾ॥ ಆರ್. ಆರ್. ಹಂಚಿನಾಳ್‌ರವರು ಪ್ರಾಧಿಕಾರದ ಅಧ್ಯಕ್ಷರಾಗಿರುತ್ತಾರೆ. ಪ್ರಾಧಿಕಾರದಲ್ಲಿ ಇತರೆ ಹದಿನೈದು ಸದಸ್ಯರುಗಳಿದ್ದು ಈ ಸದಸ್ಯರು ಸಾರ್ವಜನಿಕ ವಲಯ, ರೈತರು, ಬುಡಕಟ್ಟು ಜನಾಂಗ, ಮಹಿಳಾ ಸಂಘ ಸಂಸ್ಥೆಗಳು ಮತ್ತು ಖಾಸಗಿ ಬೀಜೋದ್ಯಮದ ಪ್ರತಿನಿಧಿಗಳನ್ನು ಒಳಗೊಂಡಿರುತ್ತಾರೆ. ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿ ರಿಜಿಸ್ಟ್ರಾರ್ ಜನರಲ್‌ರವರು ಕಾರ್ಯನಿರ್ವಹಿಸುವುದರೊಂದಿಗೆ ಕಾಯಿದೆಯನ್ನು ಅನುಷ್ಠಾನಗೊಳಿಸುವ ಮತ್ತು ತಳಿ ನೋಂದಣಿಗೆ ಒಪ್ಪಿಗೆ ನೀಡುವ ಜವಾಬ್ದಾರಿ ಹೊಂದಿರುತ್ತಾರೆ.



## ಪ್ರಾಧಿಕಾರದ ಚಟುವಟಿಕೆಗಳು

- ✔ ಹೊಸ ಸಸ್ಯ ತಳಿಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉತ್ತೇಜಿಸುವುದು, ಸಸ್ಯ ತಳಿಗಳನ್ನು, ರೈತರ ಹಕ್ಕುಗಳನ್ನು ಮತ್ತು ತಳಿವರ್ಧಕರ ಹಕ್ಕುಗಳನ್ನು ರಕ್ಷಿಸುವುದು.
- ✔ ಕಾಯ್ದೆಯ ಪ್ರಕಾರ ನೋಂದಾಯಿಸಿದ ತಳಿಗಳ ಮಾಹಿತಿಯನ್ನು ದಾಖಲಿಸಿ ತಳಿಗಳನ್ನು ಗುರುತಿಸುವುದು, ಅವುಗಳ ಪೂರ್ಣ ಪಟ್ಟಿಯನ್ನು ತಯಾರಿಸಿ ತಳಿಗಳ ರಾಷ್ಟ್ರೀಯ ರಿಜಿಸ್ಟರ್ ತಯಾರಿಸುವುದು
- ✔ ನೋಂದಾಯಿಸಿದ ತಳಿಗಳ ಬಿತ್ತನೆ ಬೀಜಗಳು ರೈತರಿಗೆ ಸಮಂಜಸ ಬೆಲೆಯಲ್ಲಿ ದೊರೆಯುವಂತೆ ಮಾಡುವುದು
- ✔ ವಿಶೇಷ ಆರ್ಥಿಕ ಗುಣವಿರುವ ಹಾಗೂ ಕಾಡುಜಾತಿಯ ಸಸ್ಯ ಸಂಪನ್ಮೂಲಗಳ ಸಂರಕ್ಷಣೆ ಮತ್ತು ತಳಿ ಅಭಿವೃದ್ಧಿ ಕಾರ್ಯಗಳಲ್ಲಿ ಕೊಡುಗೆ ನೀಡಿರುವ ರೈತ ಸಮುದಾಯ, ಬುಡಕಟ್ಟು ಜನಾಂಗ, ರೈತರ ಕೊಡುಗೆಯನ್ನು ಗುರುತಿಸಿ ಪುರಸ್ಕರಿಸುವುದು.
- ✔ ರಾಷ್ಟ್ರೀಯ ಸಸ್ಯ ವಂಶಾಣು ಬ್ಯಾಂಕಿನ ಸ್ಥಾಪನೆ ಹಾಗೂ ನಿರ್ವಹಣೆ
- ✔ ಪ್ರತಿಯೊಂದು ಬೆಳೆಗಳ ತಳಿ ನೋಂದಣಿಗೆ ಅವಶ್ಯಕವಾದ ತಳಿಗಳ ವಿಶೇಷ ಗುಣ, ಏಕರೂಪತೆ ಮತ್ತು ಸದೃಢತೆ ಗುಣಗಳ ಪರೀಕ್ಷಾ ವಿಧಾನಗಳ ಕುರಿತು ಮಾರ್ಗಸೂಚಿ ವಿವರಗಳನ್ನು ಸಿದ್ಧಪಡಿಸುವುದು.

## ಕಾಯಿದೆ ಅನ್ವಯ ಇರುವ ಹಕ್ಕುಗಳು

### ತಳಿವರ್ಧಕನ ಹಕ್ಕುಗಳು

ಪ್ರಾಧಿಕಾರದಲ್ಲಿ ಒಂದು ಬೆಳೆಯ ತಳಿಯೊಂದನ್ನು ನೋಂದಣಿ ಮಾಡಿ ದೃಢೀಕರಣ ಪತ್ರ ಪಡೆದ ನಂತರ ಸಂಬಂಧಪಟ್ಟ ತಳಿವರ್ಧಕನಿಗೆ ಕಾನೂನಿನ ಚೌಕಟ್ಟಿನಲ್ಲಿ ಆ ತಳಿಯ ಮೇಲಿನ ಬೀಜೋತ್ಪಾದನೆ, ಮಾರಾಟ, ಮಾರುಕಟ್ಟೆ, ವಿತರಣೆ, ರಫ್ತು ಮತ್ತು ಆಮದು ವಿಷಯಗಳ ಮೇಲೆ ಸಂಪೂರ್ಣ ಹಕ್ಕು ಸ್ವಾಮ್ಯ ದೊರೆಯುತ್ತದೆ. ಇಂತಹ ಹಕ್ಕುಗಳನ್ನು ತಳಿವರ್ಧಕನ ಹಕ್ಕುಗಳು ಎಂದು ಕರೆಯಲಾಗುತ್ತದೆ. ಹಕ್ಕುಗಳನ್ನು ತಳಿವರ್ಧಕನು ಇತರರಿಗೆ ಮಾರಾಟ ಮಾಡಬಹುದು ಅಥವಾ ಗುತ್ತಿಗೆ ನೀಡಬಹುದಾಗಿದೆ.

### ಸಂಶೋಧಕನ ಹಕ್ಕುಗಳು


ಕಾನೂನಿನ ಚೌಕಟ್ಟಿನಲ್ಲಿ ನೋಂದಣಿ ಮೂಲಕ ಒಂದು ಬೆಳೆಯ ತಳಿಗೆ ರಕ್ಷಣೆ ಇದ್ದರೂ ಸಹ, ಯಾವುದೇ ಕೃಷಿ ಮತ್ತು ತಳಿ ಸಂಶೋಧನೆಯ ಉದ್ದೇಶಕ್ಕಾಗಿ ಸಂಶೋಧಕರು ರಕ್ಷಿತ ತಳಿಯನ್ನು ಉಪಯೋಗಿಸಬಹುದಾಗಿದೆ. ಈ ಹಕ್ಕುಗಳನ್ನು ಸಂಶೋಧಕನ ಹಕ್ಕುಗಳು ಎಂದು ಕರೆಯಲಾಗುತ್ತದೆ.

### ರೈತರ ಹಕ್ಕುಗಳು

ನಮ್ಮ ದೇಶದ ಸಸ್ಯ ತಳಿ ರಕ್ಷಣೆ ಕಾಯಿದೆಯಲ್ಲಿ ಸಸ್ಯ ತಳಿಗಳ ರಕ್ಷಣೆ ಜೊತೆಗೆ ರೈತರ ಹಕ್ಕುಗಳಿಗೆ ರಕ್ಷಣೆ ನೀಡುವುದೇ ಕಾನೂನಿನ ಒಂದು ವೈಶಿಷ್ಟ್ಯ ಕಾಯಿದೆ ಅನ್ವಯ ರೈತರ ಹಕ್ಕುಗಳೆಂದರೆ:

#### 1. ಬಿತ್ತನೆ ಬೀಜದ ಮೇಲಿರುವ ರೈತರ ಹಕ್ಕುಗಳು

ರೈತನಿಗೆ ನೋಂದಾಯಿಸಿದ ತಳಿಯ ಬೀಜವನ್ನು ಉಳಿಸಿಕೊಳ್ಳುವ, ಮುಂದಿನ ಬಿತ್ತನೆಗೆ ಉಪಯೋಗಿಸುವ, ಇತರ ರೈತರೊಡನೆ ಹಂಚಿಕೊಳ್ಳುವ, ವಿನಿಮಯ ಮಾಡಿಕೊಳ್ಳುವ ಮತ್ತು ಇತರ ರೈತರಿಗೆ ಮಾರಾಟ ಮಾಡುವ ಹಕ್ಕುಗಳನ್ನು ಕಾಯಿದೆಯಲ್ಲಿ ಕಲ್ಪಿಸಲಾಗಿದೆ. ಆದರೆ, ರೈತರು ನೋಂದಾಯಿಸಿದ ತಳಿಯ ಬೀಜಗಳನ್ನು ಇತರರಿಗೆ ಪ್ಯಾಕ್ ಮಾಡಿ ಅಥವಾ ಮುದ್ರಾಂಕ (Brand) ಮಾಡಿ ಮಾರುವಂತಿಲ್ಲ.



### 2. ಸಾಂಪ್ರದಾಯಿಕ ತಳಿಗಳನ್ನು ರೈತರು ನೋಂದಣಿ ಮಾಡಿಸಲು ಇರುವ ಹಕ್ಕುಗಳು

ತಳಿಗಳ ಅಭಿವೃದ್ಧಿಯಿಂದ ತಳಿ ವಿಜ್ಞಾನಿಗೆ ಸಿಗುವಷ್ಟು ಪುರಸ್ಕಾರ ರೈತರಿಗೂ ಸಹ ಸಿಗುತ್ತದೆ. ರೈತ ಸಮುದಾಯದಿಂದ ತಳಿಗಳನ್ನು ಸಂರಕ್ಷಿಸಲ್ಪಟ್ಟು, ಅಭಿವೃದ್ಧಿ ಪಡಿಸಿದ್ದರೆ, ಅಂತಹವರಿಗೆ ತಳಿ ನೋಂದಣಿ ಮಾಡಿಸಲು ಅರ್ಹತೆ ದೊರೆಯುತ್ತದೆ.

### 3. ರೈತರ ಕೊಡುಗೆಯನ್ನು ಗುರುತಿಸಿ ಪುರಸ್ಕರಿಸುವ ವಿಷಯಗಳ ಮೇಲೆ ರೈತರಿಗೆ ಇರುವ ಹಕ್ಕುಗಳು

ಸಸ್ಯ ತಳಿಗಳ ರಕ್ಷಣೆಯಲ್ಲಿ ಮತ್ತು ತಳಿ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಸಹಕರಿಸಿದ ರೈತನಿಗೆ ಅಥವಾ ಒಂದು ರೈತ ಸಮುದಾಯ ಅಥವಾ ಬುಡಕಟ್ಟು ಸಮುದಾಯದ ರೈತರನ್ನು ಗುರುತಿಸಿ, ಪ್ರಾಧಿಕಾರದಲ್ಲಿ ಸ್ಥಾಪಿಸಿರುವ "ನ್ಯಾಷನಲ್ ಜೀನ್ ಫಂಡ್" ನಿಧಿಯಿಂದ ಪುರಸ್ಕರಿಸುವ ಕಾರ್ಯ ನಡೆದಿದೆ. ಈ ನಿಟ್ಟಿನಲ್ಲಿ 2007ನೇ ವರ್ಷದಿಂದ ಪ್ರತೀ ವರ್ಷ ರೈತರಿಗೆ ಪ್ರಶಸ್ತಿ ಮತ್ತು ಪುರಸ್ಕಾರಗಳನ್ನ ನೀಡಲಾಗುತ್ತಿದೆ. ಇದರಂತೆ ಸಸ್ಯ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ತೊಡಗಿರುವ ರೈತ ಮತ್ತು ರೈತ ಸಮುದಾಯವನ್ನು ಗುರುತಿಸಿ ಹತ್ತು ಲಕ್ಷ ರೂಪಾಯಿಯ ಐದು ಪ್ಲಾಂಟ್ ಜೀನೋಮ್ ಸೇವಿಯರ್ ಕಮ್ಯೂನಿಟಿ ಪ್ರಶಸ್ತಿಗಳು **(Plant Genome Saviour Community Award)**, ಒಂದು ಲಕ್ಷ ರೂಪಾಯಿಯ 10 ಪ್ರಶಸ್ತಿಗಳು ಮತ್ತು ಸನ್ಮಾನ ಪತ್ರ ಮತ್ತು 20 ಸನ್ಮಾನ ಪತ್ರಗಳು ಮತ್ತು ಸ್ಮರಣಿಕೆಯನ್ನ ನೀಡಲಾಗುತ್ತಿದೆ.

### 4. ನೋಂದಾಯಿಸಿದ ರೈತರ ತಳಿಯಿಂದ ಬಂದ ಲಾಭವನ್ನು ಹಂಚಿಕೊಳ್ಳುವ ಹಕ್ಕುಗಳು


ಯಾವುದೇ ಹೊಸ ತಳಿಯನ್ನು ಅಭಿವೃದ್ಧಿ ಮಾಡಲು ಒಂದು ಅಥವಾ ಹೆಚ್ಚು ರೈತರ ತಳಿಗಳನ್ನು ಅಥವಾ ಅವುಗಳಿಂದ ಅಭಿವೃದ್ಧಿ ಹೊಂದಿದ ತಳಿಗಳನ್ನು, ತಳಿ ಅಭಿವೃದ್ಧಿ ಕ್ರಿಯೆಯಲ್ಲಿ ಸಸ್ಯ ಸಂಪನ್ಮೂಲಗಳನ್ನಾಗಿ ಉಪಯೋಗಿಸಿದ ರೈತ ತಳಿಗಳ ಮೂಲ ಅಭಿವೃದ್ಧಿಗೆ ರೈತ ಅಥವಾ ಬುಡಕಟ್ಟು ಜನಾಂಗ ನೀಡಿದ ಕೊಡುಗೆಗಾಗಿ, ಹೊಸ ತಳಿಯಿಂದ ಬಂದ ಲಾಭವನ್ನು ಹೊಸತಳಿಯ ಅಭಿವೃದ್ಧಿಗೆ ಉಪಯೋಗಿಸಲಾದ ತಾಯಿ-ತಂದೆ ಮೂಲ ತಳಿಗಳನ್ನು ಅಭಿವೃದ್ಧಿ ಪಡಿಸಲು ಪ್ರಯತ್ನ ಮಾಡಿದ ರೈತ ಮತ್ತು ಬುಡಕಟ್ಟು ಸಮುದಾಯಗಳಿಗೂ ಹಂಚಲು ಸ್ಪಷ್ಟನೆ ನೀಡಲಾಗಿದೆ. ಈ ವಿಷಯದಲ್ಲಿ ರೈತರು ತಮಗೆ ಬರುವ ಲಾಭವನ್ನು ಪಡೆಯಲು ಮನವಿ ಮಾಡಬಹುದಾಗಿದೆ. ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರವು ತಳಿ ನೋಂದಣಿಯನ್ನು ಪ್ರಕಟ ಮಾಡಿ ರೈತರು ತಳಿಯಿಂದ ಬರುವ ಲಾಭವನ್ನು ಪಡೆಯಲು ಮನವಿಗಳನ್ನು ಸಲ್ಲಿಸಲು ಜಾಹಿರಾತು ಮಾಡುತ್ತದೆ. ಈ ರೀತಿ ಜಾಹಿರಾತು ಪ್ರಕಟಣೆಯಾದ ಆರು ತಿಂಗಳ ಒಳಗೆ ರೈತರು ಮನವಿ ಸಲ್ಲಿಸಬೇಕು. ಪ್ರಾಧಿಕಾರವು ಮನವಿಯನ್ನು ಪರಿಶೀಲಿಸಿ ಲಾಭದ ಎಷ್ಟು ಮೊತ್ತ ರೈತರಿಗೆ ಹಂಚಿಕೆಯಾಗಬೇಕು ಅನ್ನುವುದನ್ನು ನಿರ್ಧರಿಸುತ್ತದೆ.

### 5. ನೋಂದಾಯಿಸಿದ ತಳಿಯ ಬೀಜ ಉಪಯೋಗಿಸಿ ಬೆಳೆದ ಬೆಳೆಯಿಂದ ಆದ ನಷ್ಟಕ್ಕೆ ಪರಿಹಾರ ಪಡೆಯಲು ರೈತರಿಗಿರುವ ಹಕ್ಕುಗಳು

ನೋಂದಾಯಿಸಿದ ತಳಿಯ ಬೀಜವನ್ನು ರೈತರು ಖರೀದಿಸಿ, ಉಪಯೋಗಿಸಿ ಬೆಳೆದ ಬೆಳೆಯಿಂದ ನಿರೀಕ್ಷಿತ ಫಲಿತಾಂಶ ಬರದೆ, ಬೆಳೆ ನಷ್ಟವಾಗುವ ಪರಿಸ್ಥಿತಿ ಉಂಟಾದರೆ ನಷ್ಟಹೊಂದಿದ ರೈತರು ಸಲ್ಲಿಸಿದ ಮಾಹಿತಿಯನ್ನು ಪರಿಶೀಲಿಸಿ, ರೈತರಿಗೆ ಪರಿಹಾರ ನೀಡುವಂತೆ ಸಂಬಂಧಿಸಿದ ಕಂಪನಿಗಳಿಗೆ/ ತಳಿವರ್ಧಕರಿಗೆ ಪ್ರಾಧಿಕಾರ ನಿರ್ದೇಶನ ನೀಡುವುದು.

### 6. ಸಾಂಪ್ರದಾಯಿಕ ತಳಿಗಳನ್ನು ಉಪಯೋಗಿಸಿರುವ ಬಗ್ಗೆ ಮಾಹಿತಿ ನೀಡದೆ ಅವುಗಳನ್ನು ತಳಿ ಅಭಿವೃದ್ಧಿಯಲ್ಲಿ ಉಪಯೋಗಿಸಿ, ಲಾಭ ಪಡೆದಿದ್ದರೆ ಅದರ ವಿರುದ್ಧ ಪರಿಹಾರ ಪಡೆಯುವ ರೈತರ ಹಕ್ಕುಗಳು

ಹೊಸ ತಳಿಯ ಬೀಜ ಮಾರಾಟದಿಂದ ಬಂದ ಲಾಭವನ್ನು ಹಂಚಿಕೊಳ್ಳುವಾಗ ತಳಿ ಅಭಿವೃದ್ಧಿಯಲ್ಲಿ ಉಪ ಯೋಗಿಸಿದ ಮೂಲ ತಳಿಗಳ ಬಗ್ಗೆ ಸಸ್ಯ ನೋಂದಣಿಗೆ ಅರ್ಜಿ ಸಲ್ಲಿಸುವವರು ಮಾಹಿತಿ ನೀಡಬೇಕು. ಹಲವು



ಬಾರಿ ತಳಿಗಳ ಮೂಲ ಹಾಗೂ ಅದರ ವೈಶಿಷ್ಟ್ಯಗಳ ಮಾಹಿತಿ ದೊರೆಯದೆ ಅರ್ಜಿದಾರರು ತಳಿ ನೋಂದಣಿ ಅರ್ಜಿಯಲ್ಲಿ ಇದರ ಬಗ್ಗೆ ತಿಳಿಸಿರುವುದಿಲ್ಲ. ಇದರಿಂದ, ಹೊಸ ತಳಿಯ ಬೀಜ ಮಾರಾಟದಿಂದ ಬರುವ ಲಾಭವನ್ನು ಹಂಚಿಕೊಳ್ಳುವ ಅವಕಾಶ ರೈತರಿಗೆ ಸಿಗದಂತಾಗಬಹುದು. ಇಂತಹ ಸನ್ನಿವೇಶಗಳಲ್ಲಿ, ರೈತ ಸಮುದಾಯ ಅಥವಾ ಬುಡಕಟ್ಟು ಜನಾಂಗದ ಪರವಾಗಿ ಮೂರನೆ ವ್ಯಕ್ತಿ ತಳಿಯ ಬೀಜದಿಂದ ಬರುವ ಲಾಭದ ಪರಿಹಾರ ಕೇಳಬಹುದಾಗಿದೆ.

### 7. ನೋಂದಾಯಿಸಿದ ತಳಿಗಳ ಬಿತ್ತನೆ ಬೀಜದ ಮೇಲೆ ಇರುವ ರೈತರ ಹಕ್ಕುಗಳು

ನೋಂದಾಯಿಸಿದ ಹೊಸ ತಳಿಯ ಬಿತ್ತನೆ ಬೀಜ ರೈತರಿಗೆ ಸಾಕಷ್ಟು ಪ್ರಮಾಣದಲ್ಲಿ ದೊರಕುವಂತಿರಬೇಕು. ಕಾಯಿದೆಯ ಅನ್ವಯ, ತಳಿ ಸಂವರ್ಧಕನ ಹಕ್ಕುಗಳನ್ನು ರಕ್ಷಣೆ ಮಾಡುವಲ್ಲಿ, ಅವನಿಗೆ ತಳಿಯ ಬೀಜೋತ್ಪಾದನೆ ಮತ್ತು ಮಾರಾಟದ ಮೇಲೆ ಸಂಪೂರ್ಣ ಹಕ್ಕನ್ನು ನೀಡಲಾಗುತ್ತದೆ. ಹಾಗೆಯೇ ಈ ಹಕ್ಕುಗಳನ್ನು ಮಾನ್ಯ ಮಾಡುವಾಗ ರೈತರ ಬೇಡಿಕೆ ಮತ್ತು ಹಿತಾಸಕ್ತಿಯನ್ನು ಪರಿಗಣಿಸಿ ಬೀಜದ ಬೆಲೆ, ಪೂರೈಕೆ ಮತ್ತು ಗುಣಮಟ್ಟದ ಅಂಶಗಳು ನ್ಯಾಯಯುತವಾಗಿರಬೇಕೆಂದು ಪ್ರಾಧಿಕಾರವು ತಳಿ ಸಂವರ್ಧಕನಿಗೆ ನಿರ್ದೇಶನ ನೀಡುತ್ತದೆ.

### 8. ಹಲವು ಉಚಿತ ಸೇವೆ ಪಡೆಯಲು ರೈತರಿಗಿರುವ ಹಕ್ಕುಗಳು

ರೈತರು ಅಥವಾ ರೈತ ಸಮುದಾಯವು ತಳಿ ನೋಂದಣಿ ಮಾಡಲು, ತಳಿ ನೋಂದಣಿಯ ಅರ್ಜಿಯ ಶುಲ್ಕ, ಅವಶ್ಯಕವಾದ ಬೀಜ ಪರೀಕ್ಷೆ ಮಾಡಿಸಲು ಪಾವತಿಸಬೇಕಾದ ಶುಲ್ಕ, ತಳಿ ನೋಂದಣಿ ಮತ್ತು ನವೀಕರಣಕ್ಕೆ ಮತ್ತು ಕಾಯ್ದೆಯ ಯಾವುದೇ ವಿಷಯದ ವಿರುದ್ಧ ಅಥವಾ ಲಾಭಾಂಶದ ಹಂಚಿಕೆಗೆ ಮನವಿ ಸಲ್ಲಿಸಲು ಶುಲ್ಕ ತೆರಬೇಕಾಗಿಲ್ಲ.

### 9. ಮುಗ್ದತೆಯಿಂದ ಮಾಡಿದ ತಪ್ಪಿಗೆ ರಕ್ಷಣೆ ಪಡೆಯುವ ರೈತರ ಹಕ್ಕುಗಳು


ಕಾಯಿದೆಯ ಅನ್ವಯ ರೈತರು ಮುಗ್ಧತೆಯಿಂದ ಮಾಡಿದ ತಪ್ಪನ್ನು ಒಪ್ಪಿಕೊಂಡರೆ ಅಂತಹವರಿಗೆ ನ್ಯಾಯಾಲಯ ರಕ್ಷಣೆ ಕೊಡುತ್ತದೆ. ಮುಗ್ಧತೆಯಿಂದ ಎಸಗಿದ ತಪ್ಪಿಗೆ ಪುರಾವೆಗಳನ್ನು ಮತ್ತು ಬೇಕಾದ ಮಾಹಿತಿಯನ್ನು ನೀಡಬೇಕು. ಹೆಚ್ಚಿನ ರೈತರಿಗೆ ಕಡಿಮೆ ಶಿಕ್ಷಣ ಇರುವುದರಿಂದ ಹಾಗು ಖಾಸಗಿ ಬೀಜ ಕಂಪನಿಗಳು ರೈತರ ಮುಗ್ಧತೆಯನ್ನು ಶೋಷಣೆ ಮಾಡದಿರಲು ಕಾಯ್ದೆಯಲ್ಲಿ ಈ ವಿಶೇಷ ಅವಕಾಶ ಮಾಡಿಕೊಡಲಾಗಿದೆ.

## ಸಸ್ಯ ತಳಿ ನೋಂದಣಿ

ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಕಾಯಿದೆ ಅನ್ವಯ ತಳಿ ನೋಂದಣಿಯ ಒಂದು ಕಾನೂನು ಪ್ರಕ್ರಿಯೆ. ತಳಿ ನೋಂದಣಿ ಕ್ರಿಯೆ ನೋಂದಣಿದಾರನಿಗೆ ತಳಿಯ ಮೇಲೆ ಕಾನೂನು ರೀತ್ಯ ಮಾಲೀಕತ್ವವನ್ನು ನೀಡುತ್ತದೆ. ಈ ಹಕ್ಕು ಅನುವಂಶಿಕವಾಗಿ ವರ್ಗಾವಣೆ ಆಗಬಹುದು, ಇತರರಿಗೆ ಒಪ್ಪಂದದ ಮೇಲೆ ವರ್ಗಾವಣೆ ಅಥವಾ ಮಾರಾಟ ಮಾಡಬಹುದು.

### ನೋಂದಾಯಿಸಬಹುದಾದ ಬೆಳೆ – ತಳಿಗಳು

ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಅಧಿಕೃತವಾಗಿ ಪ್ರಕಟಪಡಿಸುವ ಬೆಳೆಗಳ ತಳಿಗಳು ನೋಂದಣಿಗೆ ಅರ್ಹವಾಗಿರುತ್ತವೆ. ಅಂತಹ ಬೆಳೆಗಳ "ಹೊಸ ತಳಿಗಳು", "ಚಾಲ್ತಿಯಲ್ಲಿರುವ ತಳಿಗಳು", "ರೈತರ ತಳಿಗಳು" ಮತ್ತು "ಅವಶ್ಯಕವಾಗಿ ಉತ್ಪತ್ತಿಯಾದ ತಳಿಗಳು" ನೋಂದಣಿಗೆ ಅರ್ಹವಾಗಿರುತ್ತವೆ. ಗೆಜೆಟ್‌ನಲ್ಲಿ ಪ್ರಕಟವಾಗದ ಬೆಳೆಗಳ ತಳಿಗಳು ನೋಂದಣಿಗೆ ಅರ್ಹವಾಗಿರುವುದಿಲ್ಲ.



## ತಳಿ ನೋಂದಣಿ ಪ್ರಕ್ರಿಯೆ

ತಳಿ ನೋಂದಣಿ ಮಾಡಲು ನಿಗದಿಪಡಿಸಿದ ನಮೂನೆ ಅರ್ಜಿಯನ್ನು ಭರ್ತಿಮಾಡಿ ಅದಕ್ಕೆ ಸಂಬಂಧಪಟ್ಟ ದಾಖಲೆ ಮತ್ತು ಪುರಾವೆಗಳನ್ನು, ನಿರ್ದಿಷ್ಟ ಪ್ರಮಾಣದ ತಳಿಯ ಬೀಜವನ್ನು ಸರಿಯಾದ ರೀತಿ ಪ್ರಾಧಿಕಾರದ ರಿಜಿಸ್ಟ್ರಾರ್‌ರವರಿಗೆ ಸಲ್ಲಿಸಬೇಕು. ನಂತರ ರಿಜಿಸ್ಟ್ರಾರ್‌ರವರು ಅರ್ಜಿ ಪರಿಶೀಲಿಸಿ, ಪ್ರಾಧಿಕಾರದ ಮಾಹಿತಿ ಜಾಲದಲ್ಲಿ ತಳಿಯ ನೋಂದಣಿಗೆ ಯಾವುದೇ ರೀತಿಯ ವಿರೋಧ ತಿಳಿಯಲು ಪ್ರಕಟಿಸಿ, ಸಂಬಂಧಪಟ್ಟ ತಳಿಯ ವಿಶೇಷ ಗುಣಗಳು, ತಳಿಯ ಏಕರೂಪತೆ ಮತ್ತು ಸದೃಢತೆ ಗುಣಗಳ ಪರೀಕ್ಷೆ ನಂತರ ತಳಿ ನೋಂದಣಿಗೆ ಅನುವುಮಾಡಿ ತಳಿ ನೋಂದಣಿಯ ದೃಢೀಕರಣ ಪತ್ರ ನೀಡಲಾಗುತ್ತದೆ.

## ತಳಿ ನೋಂದಣಿ ಮೂಲಕ ಕಾನೂನು ರೀತ್ಯ ಪಡೆದ ಸಸ್ಯ ತಳಿ ಮಾಲೀಕತ್ವದ ಅವಧಿ

ಕಾಯಿದೆ ಅನ್ವಯ, ತಳಿ ನೋಂದಣಿ ಮೂಲಕ ಸಸ್ಯ ತಳಿಗಳ ಮೇಲೆ ಪಡೆದ ಮಾಲೀಕತ್ವವು ತಾತ್ಕಾಲಿಕ ಅವಧಿಯದಾಗಿರುತ್ತದೆ. ಈ ಅವಧಿಯು ಹಂಬು ಬೆಳೆಗಳಾದ ದ್ರಾಕ್ಷಿ, ಮೆಣಸು, ವೀಳ್ಯದ ಎಲೆ ತಳಿಗಳು ಮತ್ತು ಮರ ಜಾತಿಗೆ ಸೇರಿದ ಮಾವು, ಕಿತ್ತಳೆ, ಸೇಬು ಇತ್ಯಾದಿ ಸಸ್ಯ ತಳಿಗಳಿಗೆ 18 ವರ್ಷಗಳ ಅವಧಿಯಾಗಿರುತ್ತದೆ. ವಾರ್ಷಿಕ ಬೆಳೆಗಳಾದ ಭತ್ತ, ಗೋಧಿ, ಕಬ್ಬು, ಆಲೂಗಡ್ಡೆ, ಬಾಳೆ, ರಾಗಿ, ಬದನೆ ಇತ್ಯಾದಿ ಬೆಳೆಗಳಿಗೆ 15 ವರ್ಷಗಳ ಅವಧಿ ಇರುತ್ತದೆ.

## ನೋಂದಣಿಗೆ ಇದುವರೆಗೆ ಅರ್ಹತೆ ಪಡೆದಿರುವ ಬೆಳೆಗಳು

ಇದುವರೆಗೆ 58 ಬೆಳೆಗಳಲ್ಲಿ DUS ಪರೀಕ್ಷೆಗೆ ಅವಶ್ಯಕವಾದ ಮಾರ್ಗಸೂಚಿ ಲಭ್ಯವಾಗಿ, ಕೇಂದ್ರ ಗೆಜೆಟ್‌ನಲ್ಲಿ ಅಧಿಕೃತ ಪ್ರಕಟಣೆ ನಂತರ, ಈ ಬೆಳೆ ತಳಿಗಳ ನೋಂದಣಿ ಕಾರ್ಯಗತದಲ್ಲಿದೆ. ಈ ಬೆಳೆಗಳೆಂದರೆ ಭತ್ತ, ಗೋಧಿ, ಜೋಳ, ಮುಸುಕಿನಜೋಳ, ಸಜ್ಜೆ, ಕಡಲೆ, ಹೆಸರುಕಾಳು, ಹುರುಳಿ, ಉದ್ದು, ಅವರೆ, ತೊಗರಿ, ಸಾಸಿವೆ, ರೇಪ್‌ಸೀಡ್, ನೆಲಗಡಲೆ, ಸೋಯಾಅವರೆ, ಸೂರ್ಯಕಾಂತಿ, ಕುಸುಬೆ, ಹರಳು, ಎಳ್ಳು, ಅಗಸೆ, ದೇಸಿ ಹತ್ತಿ, ಟೆಟ್ರಪ್ಲಾಯ್ಡ್ ಹತ್ತಿ, ಸೆಣಬು, ಕಪ್ಪು ಮೆಣಸು, ಸಣ್ಣ ಏಲಕ್ಕಿ, ಅರಿಶಿನ, ಶುಂಠಿ, ಟೊಮ್ಯಾಟೋ, ಬದನೆ, ಬೆಂಡೆಕಾಯಿ, ಹೂಕೋಸು, ಎಲೆಕೋಸು, ಆಲೂಗಡ್ಡೆ, ಈರುಳ್ಳಿ, ಬೆಳ್ಳುಳ್ಳಿ, ಸೇವಂತಿಗೆ, ಮಾವು, ಗಟ್ಟಿ ಕಾಳಿನ ಗೋಧಿ, ಡೈಕಾಕಮ್ ಗೋಧಿ, ಇತರ ಮರ ಜಾತಿಗಳು, ಪುದೀನ, ಗುಲಾಬಿ, ನಿತ್ಯ ಪುಷ್ಪ, ಬ್ರಾಹ್ಮಿ, ತೆಂಗು, ಬಿದಿರು ಆರ್ಕಿಡ್.

## ನೋಂದಣಿಗೆ ತಯಾರಾಗಿರುವ ಇತರ ಬೆಳೆಗಳು


ಸರ್ವೆ ಮರ, ನೀಲಗಿರಿ, ಕೊತ್ತಂಬರಿ, ಮೆಂತ್ಯ, ದಾಳಿಂಬೆ, ದ್ರಾಕ್ಷಿ, ಸೋರೆಕಾಯಿ, ಹಾಗಲಕಾಯಿ, ಸೌತೆಕಾಯಿ, ಕುಂಬಳಕಾಯಿ, ಬಾರ್ಲಿ, ಕಾಟಾಲಿಯ ಆರ್ಕಿಡ್ ಮತ್ತು ಫೆಲನೋಪ್ಸಿಸ್ ಆರ್ಕಿಡ್.

## ಪ್ರಾಧಿಕಾರದ ಪ್ರಕಟಣೆಗಳು

1. ಪ್ಲಾಂಟ್ ವೆರೈಟಿ ಜನರಲ್ ಆಫ್ ಇಂಡಿಯಾ – ಮಾಸಿಕ ಆಂಗ್ಲ ಮತ್ತು ಹಿಂದಿ ಭಾಷೆಯಲ್ಲಿ ಇದನ್ನು ಪ್ರಕಟಿಸಲಾಗುತ್ತಿದೆ
2. ತಳಿ ನೋಂದಣಿಗೆ ಅವಶ್ಯಕವಾದ ತಳಿಯ ವಿಶೇಷ ಗುಣಗಳನ್ನು ನಿರ್ಧರಿಸುವ ಮಾರ್ಗಸೂಚಿಯನ್ನು ಒಳಗೊಂಡ ವಿವಿಧ ಬೆಳೆಗಳ ಪ್ರಕಟಣೆಗಳು
3. ರೈತರ ಹಕ್ಕುಗಳನ್ನೊಳಗೊಂಡ ಕೈಪಿಡಿಗಳು ಮತ್ತು ಪ್ರಕಟಣೆಗಳ ಮುದ್ರಣ.

## ಕಾಯಿದೆಯ ಅನುಷ್ಠಾನದ ನಿಟ್ಟಿನಲ್ಲಿ ಆಗಿರುವ ವಿದ್ಯಮಾನಗಳು ಮತ್ತು ಪ್ರಾಧಿಕಾರದ ಚಟುವಟಿಕೆಗಳು

1. ಕಾಯಿದೆಯ ಪೂರ್ಣ ವಿವರಗಳನ್ನು ಭಾರತ ಸರ್ಕಾರವು ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಅಧಿಕೃತವಾಗಿ ಪ್ರಕಟಿಸಿದೆ



2. ಅಕ್ಟೋಬರ್ 2005ರಲ್ಲಿ, ಭಾರತ ಸರ್ಕಾರವು ಹೊಸ ಕಾಯಿದೆಯನ್ನು ದೇಶದಾದ್ಯಂತ ಅನುಷ್ಠಾನ ಗೊಳಿಸುವುದಕ್ಕಾಗಿ ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಪ್ರಾಧಿಕಾರವನ್ನು ನವದೆಹಲಿಯಲ್ಲಿ ಸ್ಥಾಪಿಸಿದೆ. ಪ್ರಾಧಿಕಾರದ ಪ್ರಸ್ತುತ ಅಧ್ಯಕ್ಷರಾಗಿ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಹಾಗೂ ಅಂತರರಾಷ್ಟ್ರೀಯ ಖ್ಯಾತಿ ಹೊಂದಿದ ಗೋದಿ ತಳಿ ವಿಜ್ಞಾನಿಗಳಾದ ಡಾ॥ ಆರ್. ಆರ್. ಹಂಚಿನಾಳ್ ರವರು ಕಾರ್ಯನಿರ್ವಹಿಸುತ್ತಿದ್ದಾರೆ.

3. ನಮ್ಮ ದೇಶದಲ್ಲಿ ಲಭ್ಯವಿರುವ ಎಲ್ಲಾ ಬೆಳೆಗಳ ತಳಿಗಳನ್ನು DUS (ತಳಿ ನೋಂದಣಿಗೆ ಅವಶ್ಯಕವಾದ ಪರೀಕ್ಷೆ) ಪರೀಕ್ಷೆಗೆ ಒಳಪಡಿಸಿ, ಅವುಗಳ ಗುಣವಿಶೇಷಗಳನ್ನು ದಾಖಲು ಮಾಡಲು ಕಾರ್ಯಕ್ರಮ ಕೈಗೊಂಡು ಈಗಾಗಲೇ 58 ಬೆಳೆಗಳಲ್ಲಿ DUS ಪರೀಕ್ಷೆಗೆ ಅವಶ್ಯಕವಾದ ಮಾರ್ಗಸೂಚಿ ಸಿದ್ಧವಾಗಿದ್ದು ಈ ಬೆಳೆ ತಳಿಗಳ ನೋಂದಣಿ ಕಾರ್ಯ ಚಾಲನೆಯಲ್ಲಿದೆ.

4. ಕಾಯಿದೆಯ ಅನ್ವಯ ನೋಂದಾಯಿಸುವ ಬೆಳೆಗಳಿಗೆ ಪಾವತಿ ಮಾಡಬೇಕಾದ ನೋಂದಣಿ ಶುಲ್ಕವನ್ನು ಹಾಗೂ DUS ಪರೀಕ್ಷೆಗೆ ಅವಶ್ಯಕವಾದ ಶುಲ್ಕಗಳನ್ನು ನಿಗಧಿಪಡಿಸಲಾಗಿದೆ.

5. ಪ್ರಾಧಿಕಾರದ ಅಧ್ಯಕ್ಷರು ಈಗಾಗಲೇ ರಾಷ್ಟ್ರದಾದ್ಯಂತ ಕಾಯಿದೆಯನ್ನು ಅನುಷ್ಠಾನಗೊಳಿಸಲು ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ರಾಜ್ಯ ಸರ್ಕಾರಗಳ ನೆರವಿನೊಂದಿಗೆ ಕಾಯಿದೆ ಅನುಷ್ಠಾನದ ಮಾರ್ಗಸೂಚಿ ಮತ್ತು ಇತರ ವಿಧಾನಗಳ ರೂಪುರೇಷೆಗಳನ್ನು ಸಿದ್ಧಪಡಿಸಲು ಪ್ರಯತ್ನ ನಡೆಸಿದ್ದಾರೆ.

6. ಪ್ರಾಧಿಕಾರವು Plant Variety Journal of India ಎಂಬ ಮಾಸಿಕ ಜರ್ನಲ್‌ನ್ನು ಪ್ರಕಟ ಮಾಡುತ್ತಿದೆ. ಈ ಜರ್ನಲ್ ಸಸ್ಯ ತಳಿ ರಕ್ಷಣೆ ಮತ್ತು ರೈತರ ಹಕ್ಕುಗಳ ಕಾಯಿದೆಯ ಅಧಿಕೃತ ಗೆಜೆಟ್ ಮಾದರಿಯಲ್ಲಿ ಇದ್ದು, ಈ ಜರ್ನಲ್‌ನಲ್ಲಿ ನೋಂದಾಯಿತ ತಳಿಗಳ ಬಗ್ಗೆ ಹಾಗೂ ಕಾಯಿದೆಗೆ ಸಂಬಂಧಪಟ್ಟಂತೆ ಆಗಾಗ್ಗೆ ಪ್ರಕಟವಾಗುವ ಸರ್ಕಾರದ ಹಾಗೂ ಪ್ರಾಧಿಕಾರದ ಆದೇಶ ಮತ್ತು ಇತರ ವಿವರಗಳನ್ನು ಪ್ರಕಟ ಮಾಡಲಾಗುತ್ತದೆ.

7. ಕಾಯಿದೆಗೆ ಸಂಬಂಧಪಟ್ಟಂತೆ ಅಗತ್ಯವಾದ "ರಾಷ್ಟ್ರೀಯ ಸಸ್ಯ ವಂಶಾಣು ನಿಧಿ" (National Gene Fund) ಯನ್ನು ಸ್ಥಾಪಿಸಲಾಗಿದೆ.


8. ದೇಶದಾದ್ಯಂತ ಕೃಷಿ ವಿಜ್ಞಾನಿಗಳಿಗೆ, ಕೃಷಿ ಸಂಬಂಧಿತ ಅಧಿಕಾರಿಗಳಿಗೆ, ಅದರಲ್ಲೂ ಮುಖ್ಯವಾಗಿ ರೈತರಿಗೆ ಕಾಯಿದೆಯನ್ನು ಪರಿಚಯಿಸಲು ಮತ್ತು ಪೂರ್ಣ ವಿವರಗಳನ್ನು ನೀಡಲು ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.


9. ಪ್ರಾಧಿಕಾರವು ಕಿಸಾನ್ ದಿವಸ್ / ರೈತರ ಮೇಳಗಳಲ್ಲಿ ಭಾಗವಹಿಸುವಿಕೆ ಮತ್ತು ಸಂಘಟಿಸುವಿಕೆ ಕಾರ್ಯಕ್ರಮಗಳನ್ನ ನಡೆಸುತ್ತಿದೆ. ಹಾಗೂ ಅನೇಕ ರೈತೋಪಯೋಗಿ ಕಾರ್ಯಕ್ರಮಗಳನ್ನು ಸಂಘಟಿಸಿದ್ದು ಈ ಎಲ್ಲ ಕಾರ್ಯಕ್ರಮಗಳನ್ನು ರೈತರ ಶ್ರೇಯೋಭಿವೃದ್ಧಿಗೆ ಸಹಕಾರಿಯಾಗುವಂತೆ ರೂಪಿಸಲಾಗಿದೆ.


10. ಸಸ್ಯ ತಳಿಗಳ ಮುಖ್ಯ ರಿಜಿಸ್ಟ್ರಾರ್ ಕಛೇರಿಯು ನವದೆಹಲಿಯಲ್ಲಿ ಪ್ರಾಧಿಕಾರದ ಕಛೇರಿಯಲ್ಲಿ ಇದ್ದು, ಸಸ್ಯ ತಳಿ ನೋಂದಣಿಯ ಕಾರ್ಯವನ್ನು ತ್ವರಿತಗೊಳಿಸಲು ಪ್ರಾಂತೀಯ ಮಟ್ಟದಲ್ಲಿ ಉಪ ರಿಜಿಸ್ಟ್ರಾರ್ ಕಛೇರಿಗಳನ್ನು, ಅಸ್ಸಾಂ ರಾಜ್ಯದ ಗೌಹಾತಿ ಮತ್ತು ಜಾರ್ಖಂಡ್ ರಾಜ್ಯದ ರಾಂಚಿ ನಗರಗಳಲ್ಲಿ ಸ್ಥಾಪಿಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರಾಂತೀಯ ಮಟ್ಟದಲ್ಲಿ ಇನ್ನೂ ಹೆಚ್ಚಿನ ಉಪ ರಿಜಿಸ್ಟ್ರಾರ್ ಕಛೇರಿಗಳನ್ನು ಇತರ ರಾಜ್ಯಗಳಲ್ಲೂ ಸಹಾ ಸ್ಥಾಪಿಸಲಾಗುವುದು.

11. ಕಾಯಿದೆಯ ಬಗ್ಗೆ ಹೊಸ ಹಾಗೂ ಹೆಚ್ಚಿನ ವಿವರಗಳು, ತಳಿ ನೋಂದಣಿ ಮಾಡಿಸಲು ಹಾಗೂ ಇತರ ಅರ್ಜಿ ನಮೂನೆಗಳು ಬೇಕಾದಲ್ಲಿ ಈ ಕೆಳಗೆ ತಿಳಿಸಿದ ವಿಳಾಸ ಅಥವಾ ವೆಬ್‌ಸೈಟ್ ಸಂಪರ್ಕಿಸಿ:

**The Chair Person / The Registrar (Farmers Rights)**
**Protection of Plant Varieties and Farmers' Rights Authority**
**NASC Complex, DPS Marg, NEW DELHI – 110 012**
**Tel.No 011-25848127, 011-25843853, Fax No. 011-25840478**
**E-mail: plantauthority@gmail.com Website: www.plantauthority.gov.in**








# ಸಸ್ಯ ತಳಿ ಮತ್ತು ರೈತರ ಹಕ್ಕುಗಳ ರಕ್ಷಣೆ ಕಾಯಿದೆ 2001